# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 473
ಸದಸ್ಯರ ಹೆಸರು : ಡಾ॥ ಜೈಮಾಲಾರಾಮಚಂದ್ರ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 06-03-2020

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸಾರಿಗೆ ಇಲಾಖೆಯಲ್ಲಿ (ಎಲ್ಲಾ ನಿಗಮಗಳೂ ಸೇರಿ) ನಿಷ್ಕ್ರಿಯಗೊಂಡಿರುವ ಬಸ್ಸುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | 2019-20ನೇ ಸಾಲಿನಲ್ಲಿ (ಫೆಬ್ರವರಿ-2020ರವರೆಗೆ) ರಾಜ್ಯ ಸಾರಿಗೆ ಇಲಾಖೆಯಲ್ಲಿ (ಎಲ್ಲಾ ನಿಗಮಗಳೂ ಸೇರಿ) ನಿಷ್ಕ್ರಿಯಗೊಂಡಿರುವ ಬಸ್ಸುಗಳ ಸಂಖ್ಯೆ ಕೆಳಕಂಡಂತಿದೆ. |

| ವರ್ಷ | ಕರಾರಸಾನಿ | ಬೆಂಮಸಾಸಂ | ವಾಕರಸಾಸಂ | ಈಕರಸಾಸಂ | ಒಟ್ಟು |
|---|---|---|---|---|---|
| 2019-20 (ಫೆಬ್ರವರಿ 2020 ರವರೆಗೆ) | 537 | 142 | 306 | 235 | 1220 |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯ ಸಾರಿಗೆ ಇಲಾಖೆಯು ಕಳೆದ 03 ವರ್ಷಗಳಲ್ಲಿ ನಿಷ್ಕ್ರಿಯಗೊಂಡಿರುವ ಎಷ್ಟು ಬಸ್ಸುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ. | ಕಳೆದ 03 ವರ್ಷಗಳಲ್ಲಿ ಸಾರಿಗೆ ಸಂಸ್ಥೆಗಳಿಂದ ನಿಷ್ಕ್ರಿಯಗೊಂಡ ಬಸ್ಸುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಿರುವ ಮಾಹಿತಿ ಈ ಕೆಳಕಂಡಂತಿದೆ. |

| ವರ್ಷ | ಕರಾರಸಾನಿ | ಬೆಂಮಸಾಸಂ | ವಾಕರಸಾಸಂ | ಈಕರಸಾಸಂ | ಒಟ್ಟು |
|---|---|---|---|---|---|
| 2017-18 | 238 | 242 | - | 172 | **652** |
| 2018-19 | 163 | 239 | - | 04 | **406** |
| 2019-20 (ಫೆಬ್ರವರಿ 2020 ರವರೆಗೆ) | 487 | 354 | 580 | 558 | **1979** |
| **ಒಟ್ಟು** | **888** | **835** | **580** | **734** | **3037** |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಇ) | ಬಸ್ಸುಗಳನ್ನು ನಿಷ್ಕ್ರಿಯ ಎಂದು ಘೋಷಿಸಲು ರಾಜ್ಯ ಸಾರಿಗೆ ಇಲಾಖೆ ಯಾವ ಮಾನದಂಡಗಳನ್ನು ಅನುಸರಿಸುತ್ತಿದೆ? | ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂ ಮತ್ತು ಈ.ಕ.ರ.ಸಾ.ಸಂಸ್ಥೆಗಳ ವಿವಿಧ ಮಾದರಿಯ ವಾಹನಗಳನ್ನು ನಿಷ್ಕ್ರಿಯಗೊಳಿಸಲು ಈ ಕೆಳಗಿನಂತೆ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. |

| ಕ್ರಸಂ | ವಾಹನದ ಮಾದರಿ | ನಿಷ್ಕ್ರಿಯಗೊಳಿಸಲು ನಿಗದಿಪಡಿಸಿದ ಕಿ.ಮೀ. |
|---|---|---|
| 1 | ನಗರ / ಗ್ರಾಮಾಂತರ ಸಾರಿಗೆ | 9.00 ಲಕ್ಷ ಕಿ.ಮೀ.<br>ಉ.ಕ.ವಿಭಾಗಕ್ಕೆ 8.00 ಲಕ್ಷ ಕಿ.ಮೀ |
| 2 | ರಾಜಹಂಸ | 9.00 ಲಕ್ಷ ಕಿ.ಮೀ. |
| 3 | ಹವಾನಿಯಂತ್ರಣ ರಹಿತ ಸ್ಲೀಪರ್ ಕೋಚ್ | 10.00 ಲಕ್ಷ ಕಿ.ಮೀ. |
| 4 | ವೋಲ್ವೋ ಎ/ಸಿ | 13.00 ಲಕ್ಷ ಕಿ.ಮೀ |
| 5 | ಎ/ಸಿ ಕರೋನಾ ಸ್ಲೀಪರ್ | 11.00 ಲಕ್ಷ ಕಿ.ಮೀ. |

ಬೆಂ.ಮ.ಸಾ.ಸಂಸ್ಥೆಯಲ್ಲಿ ವಾಹನಗಳನ್ನು 8.50 ಲಕ್ಷ ಕಿ.ಮೀ.ಗಳು ಅಥವಾ 11 ವರ್ಷಗಳ ವಯೋಮಿತಿ (ಇವುಗಳಲ್ಲಿ ಯಾವುದು ಮೊದಲು ಅದರ ಆಧಾರದ ಮೇಲೆ) ಪೂರೈಸಿದ ವಾಹನಗಳನ್ನು ಅವುಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನು, ಕವಚ ಮತ್ತು ಅಡಿಗಟ್ಟುಗಳ ಸ್ಥಿತಿಯನ್ನು ಆಧರಿಸಿ ನಿಷ್ಕ್ರಿಯಗೊಳಿಸಲಾಗುತ್ತಿದೆ.

ಅಂತೆಯೇ, ವಾಹನಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ.

ಸಂಖ್ಯೆ: ಟಿಡಿ 42 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು